# ಪತ್ರಿಕಾ ಪ್ರಕಟಣೆ

ದಿನಾಂಕ:30-09-2021 ರಂದು 17-00 ಗಂಟೆಗೆ ಪಿ.ಐ. ಸಿ.ಇ.ಎನ್. ಪೊಲೀಸ್ ಠಾಣೆ ರವರಿಗೆ ಮಾಹಿತಿ ಬಂದಿದ್ದೇನೆಂದರೆ, ಶಹಾಬಾದ ರಿಂಗ್ ರೋಡ ಹತ್ತಿರ ಕೆಲವು ಜನರು ಅನಧೀಕೃತ ಮತ್ತು ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಅಂತಾ ಬಾತ್ಮಿ ಬಂದ ಮೇರೆಗೆ, ಮಾನ್ಯ ಶ್ರೀ ಅಂಶುಕುಮಾರ ಐ.ಪಿ.ಎಸ್. ಸಹಾಯಕ ಆಯುಕ್ತರು ಉಪ ವಿಭಾಗ " ಎ" ಇವರ ಮಾರ್ಗದರ್ಶನದಲ್ಲಿ ಶ್ರೀ ಬಸವರಾಜ ಜಿ. ತೇಲಿ, ಪೊಲೀಸ್ ಇನ್ಸಪೆಕ್ಟರ್, ಸಿ.ಇ.ಎನ್. ಪೊಲೀಸ್ ಠಾಣೆ ಮತ್ತು ಕಲಬುರಗಿ ನಗರದ ರೌಡಿ ನಿಗ್ರಹ ದಳ ಪಡೆಯ ಅಧಿಕಾರಿ & ಸಿಬ್ಬಂದಿಯಾದ ಚೌಕ ಪೊಲೀಸ್ ಠಾಣೆಯ ಶ್ರೀ ಬಸವರಾಜ ಪಿ.ಎಸ್.ಐ (ಕಾ.ಸು) ಮತ್ತು ಶ್ರೀ ಬಂದೆನವಾಜ, ಹೆಚ್.ಸಿ-198, ಶ್ರೀ ಶಿವಾನಂದ ಸಿ.ಹೆಚ್.ಸಿ:-229, ಶ್ರೀ ಭೀಮಾನಾಯಕ ಸಿಪಿಸಿ:-885, ಹಾಗೂ ಶ್ರೀ ಶಿವಲಿಂಗ ಸಿಪಿಸಿ:-1241 ಮತ್ತು ಸಿ.ಇ.ಎನ್ ಪೊಲೀಸ್ ಠಾಣೆಯ ಸಿಬ್ಬಂದಿಯಾದ ಶ್ರೀ ಜಗನ್ನಾಥ ರೆಡ್ಡಿ ಹೆಚ್.ಸಿ-320, ಶ್ರೀ ಸುನೀಲಕುಮಾರ ಸಿಪಿಸಿ-570 ಇವರೊಂದಿಗೆ ಸ್ಥಳಕ್ಕೆ ಹೋಗಿ ಅನಧೀಕೃತ ಮತ್ತು ಅಕ್ರಮವಾಗಿ ಗಾಂಜಾ ಮಾರಾಟದಲ್ಲಿ ತೊಡಗಿದ್ದ 1) ನಾಗೇಶ @ ನಾಗನಾಥ ತಂದೆ ಚಂದ್ರಕಾಂತ ಕೋಳಾರೆ, ವಯ:28 ವರ್ಷ, ಜಾ: ಲಿಂಗಾಯತ, ಉ: ಕೂಲಿಕೆಲಸ ಸಾ:ಕಪಲಾಪೂರ ಗ್ರಾಮ ತಾ:ಜ:ಬೀದರ, 2) ಸಚೀನ ತಂದೆ ನಾಗಶೆಟ್ಟಿ ಶೀಲವಂತ ವಯ:26 ವರ್ಷ, ಉ:ಟೆಂಟ ಕೆಲಸ, ಸಾ:ಲಿಂಗಾಯತ, ಸಾ:ಕಪಲಾಪೂರ ಗ್ರಾಮ ತಾ:ಜಿ:ಬೀದರ, 3) ಗುಂಡಪ್ಪಾ ತಂದೆ ಸಿದ್ದಪ್ಪಾ ಕುಂಬಾರ ವಯ:30 ವರ್ಷ, ಉ:ಕೂಲಿಕೆಲಸ, ಜಾತಿ:ಕುಂಬಾರ ಸಾ:ಜೀವಣಗಿ, ತಾ:ಕಮಲಾಪೂರ ಜಿ:ಕಲಬುರಗಿ ಇವರನ್ನು ದಸ್ತಗಿರಿ ಮಾಡಿ ಅವರಿಂದ ಒಟ್ಟು 1194 ಗ್ರಾಂ ಗಾಂಜಾ ಅ.ಕಿ. ರೂ.10,000/-, ನಗದು ಹಣ ರೂ.800/- ಮತ್ತು ಒಂದು ಫ್ಯಾಶನ್ ಪ್ರೋ ಮೋಟಾರಸೈಕಲ ನಂ.ಕೆಎ:38-ವಿ-2465 ಅ.ಕಿ.ರೂ.10,000/- ನೇದ್ದವುಗಳನ್ನು ಪಂಚರ ಸಮಕ್ಷಮ ಜಪ್ತಿಮಾಡಿಕೊಂಡು ಆರೋಪಿತರ ವಿರುದ್ದ ಸಿ.ಇ.ಎನ್. ಪೊಲೀಸ್ ಠಾಣೆ ಗುನ್ನೆ ನಂ.19/2021 ಕಲಂ 20(ಬಿ)(ii)(A) ಎನ್.ಡಿ.ಪಿ.ಎಸ್. ಆಕ್ಟ 1985ರ ಪ್ರಕಾರ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಕೈಕೊಂಡಿದ್ದು, 3ಜನ ಆರೋಪಿತರಿಗೆ ನ್ಯಾಯಾಂಗ ಬಂಧನಕ್ಕಾಗಿ ಕಳುಹಿಸಿಕೊಡಲಾಗಿದೆ.

Scanned with CamScanner